ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ನಮೂನೆ:2022–23 ದಿನಾಂಕ:22.09.2022

# ಗೃಹಲೇಖನ/ಸಂಪ್ರಬಂಧ ಸಲ್ಲಿಸುವ ವಿದ್ಯಾರ್ಥಿಗಳಿಗೆ ಸೂಚನೆ

ವಿಷಯ : ಸಂಪರ್ಕ ತರಗತಿಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಗೃಹಲೇಖನ ಸಲ್ಲಿಸುವ ಕುರಿತು.

ಉಲ್ಲೇಖ :
1. ಯುಜಿಸಿ ಅಧಿಸೂಚನೆ ಸಂಖ್ಯೆ: F.N. 74-8/2017 (DEB-IV) ದಿನಾಂಕ 28.07.2017
2. ದೂರಶಿಕ್ಷಣದ ನಿಯಮಾವಳಿ 3.4
3. ಪರಿಷ್ಕೃತ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಸಂಖ್ಯೆ:ಕವಿಹಂ:ಕುಸ:ದೂಶಿನಿ:17:ಶೈವೇಅ:2022–23 ದಿ:15.09.2022
4. ದೂ.ಶಿ.ನಿ.ಯ ಉನ್ನತ ಸಲಹಾ ಸಮಿತಿ ಸಭೆ 21, ದಿ:17.08.2022, ನಿರ್ಣಯ 05ರಂತೆ
5. ದಿ:07.09.2022ರಂದು ನಡೆದ 204ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ 04
6. ಸಂಪರ್ಕ ತರಗತಿಗಳ ಅನುಮೋದನೆ ಕಡತದ ಕಂಡಿಕೆ:05, ದಿನಾಂಕ:15.09.2022ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ

* * *

ಪ್ರಿಯ ವಿದ್ಯಾರ್ಥಿಗಳೆ,

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೂರಶಿಕ್ಷಣ ನಿರ್ದೇಶನಾಲಯದ ಸ್ನಾತಕೋತ್ತರ ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಉಲ್ಲೇಖ 01 ಮತ್ತು 02ರ ಅನುಸಾರ 10 ದಿನಗಳ ಸಂಪರ್ಕ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು. ಆದರೆ, 2022–23ನೇ ಶೈಕ್ಷಣಿಕ ವರ್ಷದಲ್ಲಿ ನಡೆಯಲಿರುವ 2020–21ನೇ ಸಾಲಿನ ಸಂಪರ್ಕ ತರಗತಿಗಳಿಗೆ ಹಾಜರಾಗದ ವಿದ್ಯಾರ್ಥಿಗಳಿಗೆ ಉಲ್ಲೇಖ 03 ಮತ್ತು 04ರಂತೆ ಗೃಹಲೇಖನ/ಸಂಪ್ರಬಂಧಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ಪ್ರಕ್ರಿಯೆಗೆ ಉಲ್ಲೇಖ 06ರ ಮಾನ್ಯ ಕುಲಪತಿಗಳು ಅನುಮೋದನೆ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ದಿನಾಂಕ:01.09.2021 ರಿಂದ ದಿನಾಂಕ:30.09.2021 ವರಗೆ ದಂಡಶುಲ್ಕವಿಲ್ಲದೆ ಗೃಹಲೇಖನ/ಸಂಪ್ರಬಂಧಗಳನ್ನು ಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಬಹುದು.

ದಿನಾಂಕ:01.10.2021 ರಿಂದ ದಿನಾಂಕ:30.10.2021 ವರಗೆ ಗೃಹಲೇಖನ/ಸಂಪ್ರಬಂಧಗಳನ್ನು ರೂ.300/– ದಂಡ ಸಹಿತ ಮತ್ತು ರೂ.200/– ದಂಡ ಸಹಿತ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ದಿನಾಂಕ ನಿಗದಿಪಡಿಸಿ ಉಲ್ಲೇಖ 03ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಈ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ ಮತ್ತು ಅವದಿ ಮೀರಿ ಬಂದ ಗೃಹಲೇಖನ/ಸಂಪ್ರಬಂಧಗಳು, ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

**ಸೂಚನೆಗಳು:**

1. ವಿದ್ಯಾರ್ಥಿಗಳು ಪ್ರವೇಶ ಪಡೆದಿರುವ ಕೋರ್ಸ್‌ಗಳಿಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳನ್ನು ಸರಿಯಾಗಿ ಗಮನಿಸಿ, ಪ್ರತಿ ಪತ್ರಿಕೆಯ ಎರಡು ಸ್ವಲಿಖಿತ ಎ4 ಅಳತೆಯ ಕನಿಷ್ಠ 10 ಪುಟಗಳ ಗೃಹಲೇಖನ/ಸಂಪ್ರಬಂಧಗಳನ್ನು ಸಿದ್ಧಪಡಿಸಿ, ದ್ವಿಪ್ರತಿಯಲ್ಲಿ ಸಲ್ಲಿಸಬೇಕು.
2. ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯಗಳ ಕುರಿತು ಕಡ್ಡಾಯವಾಗಿ ಗೃಹಲೇಖನ/ಸಂಪ್ರಬಂಧ ಸಿದ್ಧಪಡಿಸಬೇಕು.
3. ಪ್ರತಿ ಪತ್ರಿಕೆಗೆ 10 ಅಂಕಗಳಂತೆ 05 ಪತ್ರಿಕೆಗಳಿಗೆ ಒಟ್ಟು 50 ಅಂಕಗಳಿರುತ್ತದೆ.
4. ಗೃಹಲೇಖನ/ಸಂಪ್ರಬಂಧಗಳು ಸ್ಪಷ್ಟವಾಗಿ ಬರೆದು, ಪಿನ್ ಬೈಂಡಿಂಗ್ ಮಾಡಿ ಸಲ್ಲಿಸಬೇಕು. ಸ್ಪೈರಲ್ ಬೈಂಡ್ ಮಾಡಿ ಸಲ್ಲಿಸಬಾರದು.
5. ಪ್ರಯೋಗ ಮತ್ತು ಸಂಪಾದನೆ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆಯಲ್ಲಿ ನೀಡುವ ವಿಷಯವನ್ನು ಆದರಿಸಿ ವರದಿಯನ್ನು ಸಲ್ಲಿಸಬೇಕು.
6. ದೂರಶಿಕ್ಷಣ ನಿರ್ದೇಶನಾಲಯದ ಮಾನ್ಯತಾ ಕೇಂದ್ರ ಮತ್ತು ವಿಸ್ತರಣಾ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಕೇಂದ್ರಗಳಿಗೆ ಗೃಹಲೇಖನ/ಸಂಪ್ರಬಂಧಗಳನ್ನು ಸಲ್ಲಿಸಬೇಕು.
7. **ಗೃಹಲೇಖನ ಕಳುಹಿಸುವ ವಿಳಾಸ** : ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಕೇಂದ್ರಗಳಲ್ಲಿ ಮತ್ತು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು **ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583 276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ** ಈ ವಿಳಾಸಕ್ಕೆ ಸಲ್ಲಿಸಬೇಕು.

ದೂರಶಿಕ್ಷಣ ನಿರ್ದೇಶನಾಲಯವು ಕಾಲಕಾಲಕ್ಕೆ ಹೊರಡಿಸುವ ಆದೇಶ, ಅಧಿಸೂಚನೆ, ಸುತ್ತೋಲೆಗಳನ್ನು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.kannadauniversity.org ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಅಥವಾ ಮೊಬೈಲ್ ಸಂಖ್ಯೆ : 8792219968 ಸಂಪರ್ಕಿಸಬಹುದು.

22/9/22

**ನಿರ್ದೇಶಕರು**
ದೂರಶಿಕ್ಷಣ ನಿರ್ದೇಶನಾಲಯ

G:Contect/Suttole Letter 1